(ಅ) ಸಾಮೂಹಿಕ ತುಂತುರ ನೀರಾವರಿ ಯೋಜನೆಯ ಮೇರೆಗೆ ಪ್ರಾರಂಭಿಸಲಾದ ಪಂಪು ಸೆಟ್ಟು ಯಂತ್ರಗಳು ಪದೇ ಪದೇ ಕೆಟ್ಟು ಪ್ರಯೋಜನದಾರರು ಹಾನಿಗೊಳಗಿಗಾಗಿ ತೊಂದರೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಈ ಕುರಿತು ಸರ್ಕಾರದವರು ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದ್ದಾರೆ ?

(ಇ) ಈ ದಿಶೆಯಲ್ಲಿ ಯಂತ್ರ ದುರಸ್ತಿ ಸಂಚಾರಿ ವಾಹನವನ್ನು ಆವರ ವೆಚ್ಚದಲ್ಲಿ ಒದಗಿಸುವುದು ಯಾವುದಾದರೂ ಯೋಜನೆ ಸರ್ಕಾರದಲ್ಲಿದೆಯೇ?

(ಈ) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು).—(ಅ) ಸಾಮೂಹಿಕ ತುಂತುರ ನೀರಾವರಿ ಯೋಜನೆಯ ಮೇರೆಗೆ ತೆಗೆದುಕೊಂಡ ಪಂಪುಸೆಟ್ಟು ಯಂತ್ರಗಳಲ್ಲಿ ಕೆಲವು ಕಡೆ ಕೆಟ್ಟಿವೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಸಾಮೂಹಿಕ ತುಂತುರ ನೀರಾವರಿ ಸಹಕಾರ ಸಂಘಗಳು ಮತ್ತು ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಂಸ್ಥೆಗಳಿಗೆ ದುರಸ್ತಿ ಮಾಡಲು ತಿಳಿಸಲಾಗಿದೆ.

(ಇ) ಇದುವರೆಗೆ ಸರ್ಕಾರ ಈ ಬಗ್ಗೆ ಯಾವ ಯೋಜನೆಯನ್ನು ಹಾಕಿಕೊಂಡಿಲ್ಲ. ಆದರೆ ಪ್ರಯೋಜನ ಹೊಂದತಕ್ಕ ಜನ ಆಥವಾ ಸಂಸ್ಥೆ ದುರಸ್ತಿಗೆ ತಗಲುವ ವೆಚ್ಚವನ್ನು ಭರಿಸುವುದಾದರೆ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

(ಈ) ಸಾಮೂಹಿಕ ತುಂತುರ ನೀರಾವರಿ ಯೋಜನೆಯ ಸಹಕಾರ ಸಂಸ್ಥೆಗಳು ಹಾಗೂ ಇತರ ಪ್ರಯೋಜಕರು ಈ ಬಗ್ಗೆ ತಗಲುವ ವೆಚ್ಚವನ್ನು ಪಡಿಸಿಕೊಳ್ಳಲು ಒಪ್ಪಿ ಮುಂದೆ ಬಂದರೆ ಕೂಡಲೇ ಅದರ ಬಗ್ಗೆ ಪರಿಶೀಲಿಸಲಾಗುವುದು.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಕರ್ನಾಟಕ ರಾಜ್ಯ ವ್ಯವಸಾಯ ಧಾನ್ಯ ಉತ್ಪನ್ನಗಳ ಸಂಸ್ಥೆ ನಿಯಮಿತ

೨೬೭ (೭೧) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ಕರ್ನಾಟಕ ಆಗ್ರೋಕಾರನ್ ಪ್ಯಾಡಕ್ಟ್ಸ್ ಅವರು ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುತ್ತಿರುವುದು ನಿಜವೇ?

(ಆ) ಹಾಗಿದ್ದಲ್ಲಿ ಅವರು ಪ್ರತಿವರ್ಷ ಶಾಲಾ ಮಕ್ಕಳಿಗೆ ಒದಗಿಸುತ್ತಿರುವ ಪೌಷ್ಟಿಕ ಆಹಾರದ ಒಟ್ಟು ಮೊತ್ತವೆಷ್ಟು?

(ಇ) ಶಾಲಾ ಮಕ್ಕಳಿಗಾಗಿ ರಾಜ್ಯದಲ್ಲಿರುವ ''ಪೌಷ್ಟಿಕ ಆಹಾರ ತಯಾರಕಾ ಘಟಕಗಳು'' ಎಷ್ಟು? ಮತ್ತು ಪ್ರತಿ ಘಟಕದ ಉತ್ಪಾದನಾ ಸಾಮರ್ಥ್ಯವೆಷ್ಟು?

(ಈ) ಶಾಲಾ ಮಕ್ಕಳ ಪೌಷ್ಟಿಕ ಆಹಾರದ ತಯಾರಿಕೆಯ ಕ್ರಮವೇನು?

(ಉ) ಹಾಗಿದ್ದಲ್ಲಿ ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎಲ್. ಗೌಡ (ಮಾನ್ಯ ಕೃಷಿ ಮಂತ್ರಿಗಳು).—

(ಅ) ಹೌದು.

(ಆ) ಪ್ರತಿ ವರ್ಷ ಮುನ್ನೂರು ಲಕ್ಷ ರೂಪಾಯಿಗಳು.

(ಇ) ರಾಜ್ಯದಲ್ಲಿ ನಾಲ್ಕು ಘಟಕಗಳಿವೆ. ಪ್ರತಿ ಘಟಕವು ೮ ಗಂಟೆಯ ಅವಧಿಯ ಪ್ರತಿ ಪಾಳಿಯಲ್ಲಿಯೂ ೬ ಮೆಟ್ರಿಕ್ ಟನ್‌ಗಳಷ್ಟು ಪೌಷ್ಟಿಕ ಆಹಾರವನ್ನು ಉತ್ಪಾದಿಸುತ್ತದೆ.

(ಈ) ಪೌಷ್ಟಿಕ ಆಹಾರ ತಯಾರಿಕೆಗೆ ಬೇಕಾದ ಸಾಮಗ್ರಿಗಳನ್ನು ಪ್ರಮಾಣಬದ್ಧವಾಗಿ ಬೆರೆಸಿ ಸಂಸ್ಕರಿಸಲಾಗುತ್ತದೆ. ಸಂಸ್ಕರಣ ಮಾಡುವಾಗ ಶುದ್ಧೀಕರಣ, ಹುರಿಯುವಿಕೆ, ತಂಪಾಗಿಸುವಿಕೆ ಹಾಗೂ ಪುಡಿ ಮಾಡುವಿಕೆಗಳನ್ನು ಮಾಡುತ್ತಾರೆ. ನಂತರ ಇದನ್ನು ಮಿಶ್ರ ಮಾಡಿ ಪೊಟ್ಟಣ ಕಟ್ಟಲಾಗುತ್ತದೆ.

(ಉ) ಪ್ರಶ್ನೆ ಅರ್ಥವಾಗದು.

ಶ್ರೀ ಜಿ. ಎಸ್. ಬಸವರಾಜು.—ಪ್ರಶ್ನೆ (ಇ)ನಲ್ಲಿ ಶಾಲಾ ಮಕ್ಕಳಿಗಾಗಿ ರಾಜ್ಯದಲ್ಲಿರುವ ಪೌಷ್ಟಿಕ ಆಹಾರ ತಯಾರಕಾ ಘಟಕಗಳು ಎಷ್ಟು ಮತ್ತು ಪ್ರತಿ ಘಟಕದ ಉತ್ಪಾದನಾ ಸಾಮರ್ಥ್ಯ ವೆಷ್ಟು ಎಂದು ಕೇಳಿರುವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ ನಾನು ಈಗ ಕೇಳುವುದೇನೆಂದರೆ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರಗಳನ್ನು ಒದಗಿಸುತ್ತಿರುವ ಬಗ್ಗೆ ಇಲಾಖೆಯ ವತಿಯಿಂದ ದೂರುಗಳೇನಾದರೂ ಬಂದಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಎಲ್. ಗೌಡ.—ದೂರುಗಳು ವಿರುದ್ಧವಾಗಿ ಎಲ್ಲಿಂದಲೂ ಬಂದಿಲ್ಲ. ತಮಿಳು ನಾಡು, ಆಂಧ್ರ ಈ ಪ್ರದೇಶಗಳಿಂದಲೂ ಇಲ್ಲಿ ತಯಾರು ಮಾಡತಕ್ಕಂಥ ಪೌಷ್ಟಿಕ ಆಹಾರಗಳು ಚೆನ್ನಾಗಿರುತ್ತವೆಂದು ತರಿಸಿಕೊಳ್ಳುತ್ತಿದ್ದಾರೆ. ಹೆಚ್ಚು ಹೆಚ್ಚು ಆರ್ಡರ್‌ಗಳೂ ಕೂಡ ಬರುತ್ತಿವೆ.

ಶ್ರೀ ಜಿ. ಎಸ್. ಬಸವರಾಜು.—ಸ್ವಾಮಿ ಅವರು ತಯಾರು ಮಾಡತಕ್ಕಂಥ ಆಹಾರ ಪದಾರ್ಥಗಳು ಏನು ಇವೆ, ಅವುಗಳಿಗೆ ಯಾವ ಯಾವ ಆಹಾರ ಪದಾರ್ಥಗಳನ್ನು ಹಾಕಿ ಮಿಶ್ರಣ ಮಾಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ಬಿ. ಎಲ್. ಗೌಡ.—ಮಾನ್ಯ ಅಧ್ಯಕ್ಷರೇ ನಾವು ಸಿ.ಎಫ್.ಟಿ.ಆರ್.ಐ. ಅವರು ತಯಾರು ಮಾಡಿದ ಆಹಾರವನ್ನು ಟೆಸ್ಟ್ ಮಾಡಿ ಅವರ ಸಮ್ಮುಖದಲ್ಲಿಯೇ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರು ಆಹಾರ ಪದಾರ್ಥಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅನೇಕ ಕಡೆ ದೂರುಗಳೂ ಕೂಡ ಬಂದಿರುತ್ತವೆ. ಮಕ್ಕಳು ತಿಂದಮೇಲೆ ಅನೇಕ ರೀತಿಯಲ್ಲಿ ವಾಂತಿ ಬೇಧಿ ಉದ್ಭವವಾಗಿರುತ್ತದೆ. ಸಾರ್ವತ್ರಿಕವಾದ ದೂರುಗಳೂ ಕೂಡ ಬರತಕ್ಕಂಥದ್ದು ಇರುತ್ತದೆ. ಸಿ.ಎಫ್.ಟಿ.ಆರ್.ಐ. ಮುದ್ರೆ ಹಾಕಿದ ಮಾತ್ರಕ್ಕೆ ಎಲ್ಲ ಸರಿಯಾಗಿದೆ ಎನ್ನುವುದು ಸರಿಯಲ್ಲ. ಆ ಬಗ್ಗೆ ಕೂಲಂಕುಷವಾಗಿ ಶೋಧನೆ ಮಾಡಿ ಸಿ. ಎಫ್. ಟಿ. ಆರ್. ಐ. ಅವರು ತಯಾರು ಮಾಡಿದ್ದನ್ನು ಬೇರೆಕಡೆಯಿಂದ ಟೆಸ್ಟ್ ಮಾಡಿಸಿ ಪುನರ್ ಪರಿಶೀಲನೆ ಮಾಡ ಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಲ್. ಗೌಡ.—ಇಲ್ಲಿಯವರೆಗೆ ದೂರು ಬಂದಿಲ್ಲ. ದಯವಿಟ್ಟು ದೂರನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕಳುಹಿಸಿಕೊಟ್ಟರೆ ಅದನ್ನು ಪರೀಕ್ಷೆ ಮಾಡಿಸುತ್ತೇನೆ.

ಶ್ರೀ ಜಿ. ಎಸ್. ಬಸವರಾಜ್.—(ಸ್ಯಾಂಪಲ್ ಪಾಕೆಟ್‌ನ್ನು ಕಳುಹಿಸಿ ಕೊಡುತ್ತಾರೆ.)

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಮಾನ್ಯ ಸದಸ್ಯರು ದೂರು ಕೊಟ್ಟಿರುತ್ತಾರೆ. ಮತ್ತು ಸ್ಯಾಂಪಲನ್ನು ಸಹ ಕೊಡುತ್ತಿದ್ದಾರೆ.

ಶ್ರೀ ಬಿ. ಎಲ್. ಗೌಡ.—ಅವರು ಕಳುಹಿಸಿರತಕ್ಕಂಥ ಸ್ಯಾಂಪಲ್‌ನ್ನು ಪರಿಶೀಲನೆ ಮಾಡಿಸುತ್ತೇನೆ.

ಅಧ್ಯಕ್ಷರು.—ಅದು ಯಾವ ಶಾಲೆಯದ್ದು ಅಥವಾ ಬೇರೆ ಬರತಕ್ಕಂಥ ಬಲ್ಕ್ ಅದನ್ನು ನೋಡಬೇಕಲ್ಲ.

ಶ್ರೀ ಜಿ. ಎಸ್. ಬಸವರಾಜ್.—ಇದಕ್ಕೆ ಮೆಕ್ಕೆ ಜೋಳ, ಗೋದಿ, ಕಡಲೆಬೇಳೆ ಇತ್ಯಾದಿ ಮಿಕ್ಸ್ ಮಾಡಿರುವುದರ ಜೊತೆಗೆ ಕಲ್ಲು ಕಬ್ಬಿಣದ ಪುಡಿಯು ಸೇರಿರುತ್ತದೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗಿರುವುದಲ್ಲದೆ ಇದನ್ನು ತಿಂದ ಎಷ್ಟೋ ಮಕ್ಕಳೂ ಕೂಡ ಸತ್ತುಹೋಗಿರುತ್ತಾರೆ. ಪರಿಸ್ಥಿತಿ ಹೀಗಿದ್ದರೂ ಕೂಡ ಸರ್ಕಾರದವರು ಏನು ಕ್ರಮ ತೆಗೆದು ಕೊಳ್ಳದೆ ಇರತಕ್ಕಂಥದ್ದು ಬಹಳ ಶೋಚನೀಯವಾಗಿದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅದು ಯಾವ ಶಾಲೆಗೆ ಸಂಬಂಧಪಟ್ಟಿರುತ್ತದೆಂಬುದರ ಬಗ್ಗೆ ಸ್ಪೆಸಿಫಿಕ್ ಇನ್‌ಸಿಡೆಂಟ್ ಇದ್ದರೆ ಕೊಡಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗ್ರಾಮೀಣ ಪಶುವೈದ್ಯ ಶಾಲೆಗಳ ಮತ್ತು ಆಲ್ಲಿನ ಸಿಬ್ಬಂದಿಯ ಬಗ್ಗೆ

೨೮೮ (೯೮) ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಪಶುಸಂಗೋಪನೆ ಪಶು ವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪಶುವೈದ್ಯ ಶಾಲೆಗಳೆಷ್ಟು ಹಾಗೂ ಅವುಗಳಿರುವ ಸ್ಥಳಗಳಾವುವು ?

(ಆ) ಇವುಗಳಲ್ಲಿ ಎಷ್ಟು ಕಡೆ ಮತ್ತು ಯಾವ ಸ್ಥಳಗಳಲ್ಲಿ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆ, ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ?

(ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವನಾಥರೆಡ್ಡಿ (ಮಾನ್ಯ ಪಶುಸಂಗೋಪನಾ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೩ ಪಶುವೈದ್ಯ ಶಾಲೆಗಳು ಇರುವುವು. ಅವುಗಳಿರುವ ಸ್ಥಳಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ವಿವರಿಸಲಾಗಿದೆ.

(ಆ) ಸೂಳ್ಯದ ಪಶುವೈದ್ಯ ಶಾಲೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆಯೊಂದು ಒಂದು ತಿಂಗಳಿಂದ ಖಾಲಿ ಇರುವುದು. ಇದಲ್ಲದೆ ೩೦ ಪಶುಪರೀಕ್ಷಕರು ಹಾಗೂ ೪೮ ಔಷಧಿ ಮಿಶ್ರಣಕಾರರ ಹುದ್ದೆಗಳು ಒಂದು ವರ್ಷದಿಂದ ಖಾಲಿ ಇರುವುವು. ಇವುಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ತೋರಿಸಲಾಗಿದೆ.

(ಇ) ಸೂಳ್ಯದ ಸಹಾಯಕ ನಿರ್ದೇಶಕರ ಹುದ್ದೆಯನ್ನು ಬಡ್ತಿ ಹೊಂದಿದ ಪಶುವೈದ್ಯರಿಂದ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇಲಾಖೆಯ ನೇಮಕಾತಿ ಸಮಿತಿಯು ಪಶುಪರೀಕ್ಷಕರನ್ನು ಮತ್ತು ಔಷಧಿ ಮಿಶ್ರಣಕಾರ ಹುದ್ದೆಗಳನ್ನು ಆರಿಸಲು ಕ್ರಮ ತೆಗೆದುಕೊಳ್ಳಲಿದೆ. ಈ ರೀತಿ ಆರಿಸಿಕೊಳ್ಳಲಾದ ವಿದ್ಯಾರ್ಥಿಗಳು ತರಬೇತಿ ಹೊಂದಬೇಕಾಗಿದೆ. ಇದಕಾಗಿ ಈಗಾಗಲೇ ತರಬೇತಿ ಕೇಂದ್ರಗಳನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ, ಮತ್ತು ಅವುಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಒಂದು ವರ್ಷ ಅಥವಾ ಎರಡು ವರ್ಷ ಕರಾರಿನ ಮೇಲೆ ನಿವೃತ್ತ ಪಶುಪರೀಕ್ಷಕರನ್ನು ಮತ್ತು ಔಷಧಿ ಮಿಶ್ರಣಕಾರರನ್ನು ನೇಮಕ ಮಾಡಿಕೊಳ್ಳಲು ಸರ್ಕಾರವು ಪರಿಶೀಲಿಸುತ್ತಿದೆ.